Shodha International Recognition
Multi Disciplinary Research Journal
ISSN 2454-7255
Volume-2 | Issue-2 | Nov-2013
Available online at www.godutaidegree.org

# ಬಹಮನಿ ಸುಲ್ತಾನರ ಕಾಲದ ಕಲಬುರಗಿಯ ಪ್ರಮುಖ ಸ್ಮಾರಕಗಳು

**Prof. Sureshkumar Nandagaon**
Asst Professor, HOD Dept. of History
Godutai Doddappa Appa Arts & Commerce College for Women
Kalaburagi Karnataka

## ಪ್ರಸ್ತಾವನೆ:-

12ನೇ ಶತಮಾನದ ನಂತರ ಅಂದರೆ ಗುಲಾಮ ಸಂತತಿಯ ಸ್ಥಾಪನೆಯ ಒಂದು ಶತಮಾನದ ನಂತರವೂ ಅವರ ರಾಜ್ಯದ ಮೆರೆಗಳು ಉತ್ತರ ಭಾರತಕ್ಕೆ ಮಾತ್ರ ಸಿಮೀತವಾಗಿದ್ದವು. ಮಲ್ಲಿಕಾಘೂರನ ದಕ್ಷಿಣದ ದಂಡಯಾತ್ರೆಯು ಸಂಪ್ತನುಕೊಳೆಹೊಡೆಯುವ ಯುದ್ಧ, ಅಥವಾ ದಾಳಿಯಾಗಿತೆ ಹೋರತು. ರಾಜ್ಯಸ್ಥಾಪನೆಯ ಉದೇಶ ಹೊಂದಿರಲಿಲ್ಲ, ಮಹ್ಮದ ಬಿನ ತುಘಲಖನ ಸಿಂಹಾಸನಾರೋಹಣದ ನಂತರ ದಕ್ಷಿಣ ಭಾರತದಲ್ಲಿ ಹಲವು ರಾಜಕೀಯ ಬದಲಾವಣೆಗಳು ಆದವು. ಸೂರಪುರದ ಸಗರನಾಡು ಆ ಸಮಯಕೆ ಬಾಉದೀನ ಗುರ್ಶಫ ಎಂಬ ಸುಲ್ತಾನನ ಸಹೋದರ ಸಂಬಂಧಿಯ ಆಳಿಕೆಗೆ ಒಳಪಟ್ಟಿದ್ದು. ಇತನು ಸುಲ್ತಾನನ ವಿರುದ್ಧ ದಂಗೆ ಎದ್ದು ಸ್ವಾತಂತ್ರ್ಯ ಘೋಷಣೆ ಮಾಡಿಕೊಂಡನು. ಅಲ್ಲದೆ ಕಂಪಿಲರಾಯನೊಂದಿಗೆ ಸ್ನೇಹಯುತ್ತ ಸಂಬಂಧ ಬೆಳೆಸಿದನು.

ಕಂಪಲಿ ಸಂಸ್ಥಾನವು 3ನೇ ಸಿಂಗಣನಿಂದ ಸ್ಥಾಪನೆಗೊಂಡು ಇದು ಪ್ರಸಕ್ತ ರಾಯಚೂರ, ಧಾರವಾಡ, ಬಳ್ಳಾರಿ ಮತ್ತು ಅನಂತಪೂರ ಜಿಲ್ಲೆಗಳ ಪ್ರದೇಶವನ್ನು ಆವರಿಸಿತ್ತು. ಸಿಂಗಣನ ನಂತರ ಅಧಿಕಾರಕೆ ಬಂದ ಕಂಪಿಲರಾಯನ್ನು ಮುಸ್ಲಿಂರ ವಿರುದ್ಧ ಮತ್ತು ದಕ್ಷಿಣದಲ್ಲಿ ಮುಸ್ಲಿಂರ ದಾಳಿಯ ಕಡು ವಿರೋಧ ಮಾಡಿದನಲ್ಲದೆ. ದೇವಗಿರಿಯ ರಾಮದೇವನಿಗೆ ಯುದ್ಧ ಸಾಹಯ ನೀಡಿದನು. ಇದರಿಂದಾಗಿ ಕಂಪಿಲರಾಯನು ಮಹ್ಮದಲೀನ ತುಘಲಖನ ವಿರೋಧ ಕಟ್ಟಿಕೊಂಡನು. ಅಲ್ಲದೆ ಬಾವುದೀನನನಿಗೆ ಆಶ್ರಯನೀಡಿ ಯುದ್ಧಕೆ ಆಮಂತ್ರಣ ನೀಡಿದನು. ಇದರಿಂದಾಗಿ 1326ರಲ್ಲಿ ಸುಲ್ತಾನನು ಸೈನದಾಳಿಮಾಡಿ ರಾಜ್ಯವನ್ನು ವಶಪಡಿಸಿಕೊಂಡಿತು. ಈ ದಾಳಿಯಿಂದಾಗಿ ಸಗರನಾಡಿನ ಪ್ರದೇಶವಾದ ಸುರಪುರ ಎಂಬ ಹೆಸರು ಸೊರಾಪುರ ಎಂದು ಇದೇ ಕಾಲಕೆ ಬದಲಾವಣೆಗೊಂಡಿತು. ಅಲ್ಲದೆ ಅದು ಆಡಳಿತದ ಪ್ರಮುಖ ಕೇಂದ್ರವಾಯಿತು. ಈ ಎಲ್ಲ ದಂಗೆಗಳ ಪರಿಣಾಮವೆ ಕಲಬುರಗಿಯಲ್ಲಿ ಬಹುಮನಿ ರಾಜ್ಯ ಸ್ಥಾಪನೆಯ

ಮೂಲಕಾರಣಗಳಾದವು. ಈ ದಂಗೆಗಗಳಲ್ಲಿ ಮಹತತ್ವದ ಪಾತ್ರವಹಿಸಿದ ಹಸನನು ದಂಗೆಕೋರರ ನಾಯಕನೆಂದು ಆಯ್ಕೆ ಮಾಡಲಾಯಿತು. ಈ ರೀತಿ ಆಯ್ಕೆ ಆದ ಹಸನ 1347ರಲ್ಲಿ ಅಬ್ದುಲ್- ಮುಜಾಫರ ಅಲಾ-ಉದ್ದೀನ ಬಹುಮನಿ ಶಾಹ, ಎಂಬ

ಪದನಾಮದೊಂದಿಗೆ ಬಹುಮನಿ ರಾಜ್ಯವನ್ನೂ ಸ್ಥಾಪಿಸಿದನು. ಅದರ ರಾಜ್ಯಧಾನಿ ದೌಲತಾಬಾದ ದಿಂದ ಗುಲಬರ್ಗಾಕ್ಕೆ ವರ್ಗಾವಣೆ ಆಯಿತು. ಈ ಕೋಟೆಯಲ್ಲಿರುವ ಪ್ರರ್ಶಿನ ಶಾಸನದ ಅನುಸರವಾಗಿ ಸಿಕಂದರ-ಎ-ಸಾನಿ ಅಲಾ-ಉದ.ದೀನ ಹಸನ ಬಹುಮನಿ

ಶಾಹಿ-ಆಲ್-ವಾಲ್ಲಿಯ ಎಂಬುದು ಆತನ ಪದನಾಮವಾಗಿದೆ ಎಂದು ವಿವರಿಸುತ್ತದೆ. ಅಲ್ಲದೆ ಈ ಹೊಸ ರಾಜ್ಯವನ್ನು ಬಹುಮನ ಶಾಹಿ ಎಂದು ಕರೆಯಲಾಯಿತು ಎಂದು ಫರಿಸ್ತಾ ತನ್ನ ಗ್ರಂಥದಲ್ಲಿ ಹೇಳಿದ್ದಾನೆ. ಈ ಹಸನನ ಮೂಲ ಕುರಿತು ತಬತಬಾ ಎಂಬ ಇತಿಹಾಸಕಾರ ತನ್ನ ಕೃತಿ ಬುರಾನ-ಎ-ಮಾಸಿರ ಎಂಬ ಕೃತಿಯಲ್ಲಿ ಹಸನನ್ನು ಪ್ರರ್ಶಿದ ಬಹಮನಿ ವಂಶಕೆ ಸೇರಿದವನೆಂದು ಆದರಿಂದಲೇ ಇತನಿಂದ ಸ್ಥಾಪಿಸಿದ ಈ ರಾಜ್ಯಕ್ಕೆ ಬಹಮನಿ ಎಂದು ನಾಮಕರ ಮಾಡಿ ಆ ಹೆಸರಿನಿಂದ ಕರೆಯಲಾಗಿದೆ ಎಂಬ ಮಾಹಿತಿ ನೀಡಿದ್ದಾನೆ.

ಮೂಲ ಹೆಸರು:-ಕಲಬುರಗಿ ಎಂದು ಇತಿಹಾಸದಲ್ಲಿ ಪ್ರಸಿದ ವಿರೋಧ ಗುಲಬರ್ಗಾ ಕಲ್ಲಿನನಾಡು, ಕಲಬುರಗಿ, ಕಲಂಬುರ್ಗಿ ಕಲ್ಲಿನ ದುರ್ಗ ಎಂದು ಚನುಮಳಿಶಾಸನ ಬೆಲ್ಲೂರು ಶಾಸ್ತ್ರಗಳಲ್ಲಿ ಕಲಬುರಗಿಗೆ ಕಲಂಬುರ್ಗಿ ಎಂಬ ಅನ್ವರ್ತಕ ಹೆಸರುಗಳು ಇವೆ ಅಲ್ಲದೆ ಗುಲಬರ್ಗಾ ಎಂದು ಕೂಡ ಕರೆಯಲಾಗಿದೆ. ಗುಲ-ಎಂದರೆ? ಹೂ ಬರ್ಗ ಎಂದರೆ? ಎಲೆ ಎಂದು ಹೋ ಮತ್ತು ಎಲೆಗಳ ನಾಡು ಗುಲಬರ್ಗಾ ಎಂದು ಕೂಡ ಈ ಭಾಗವನ್ನು ಕರೆಯಲಾಗಿದೆ ಭೌಗೋಳಿಕ ನೆಲೆ :- ಕಲಬುರಗಿ ಉತ್ತರ ಈಶಾನ್ಯದಲ್ಲಿ ಇರುವ ಈ ನಾಡು ಕರ್ನಾಟಕದ ಸರಕಾರದ ಆಡಳಿತ ವಿಭಾಗದಲ್ಲಿ ಉಪ ವಿಭಾಗವಾಗಿದೆ ಅಲ್ಲದೆ ಇದನ್ನು ಹೈದ್ರಾಬಾದ ಕರ್ನಾಟಕವೆಂದು ಕರೆಯಲಾಗುತ್ತದೆ. ಒಟ್ಟು 16.224 ಖಿಂ ಇಾಟ ವಿಸ್ತಾರ ವಿರುವ ಈ ಜಿಲ್ಲೆ ಕರ್ನಾಟಕದ ಎರಡನೆ ಅತಿದೊಡ್ಡ ಜಿಲ್ಲೆಯಾಗಿದೆ.

ತಾಜುದ್ದೀನ್ ಫಿರೋಜಷಾ, (ಕ್ರಿ.ಶ. 1397-1422) ಬಹುಮನಿಯನ್ನಾಳಿದ ಸುಲ್ತಾನರುಗಳಲ್ಲಿ ಹೆಚ್ಚು ಸುಶಿಕ್ಷನು. ಜನಪ್ರಿಯನಾದ ಫಿರೋಜಷಾ ಸುಸಂಸ್ಕೃತನೂ. ವಿದ್ಯಾವಂತನೂ ಬಹುಭಾಷಾವಿಶಾರದನು. ವೇದಾಂತ, ಗಣಿತ, ನೀತಿಶಾಸ್ತ್ರ, ಮುಂತಾದ ವಿಷಯಗಳಲ್ಲಿ ಪಾಂಡಿತ್ಯಹೊಂದಿದನು. ಹಾಗೂ ಕಟ್ಟಡ ನಿರ್ಮಾಣಕಾರ್ಯಗಳಲ್ಲಿ ವಿಶೇಷ ಆಸಕ್ತಿ ಹೊಂದಿದ್ದನು ಅದರಿಂದಾಗಿ ಕರ್ಡ್ಲೊವ ಎಂಬ ಸ್ಪೇನಿನ ದೇಶದಲ್ಲಿರುವ ಸುಂದರ ಮಸೀದಿಯ ಮಾದರಿಯಲ್ಲಿ ಗುಲಬರ್ಗಾದ ಕೋಟೆಯಲ್ಲಿ ಮಸೀದಿಯೊಂದನ್ನು ಕಟ್ಟಿಸಿದನು. ಈ ಮಸಿದಿಯ ವೈಶಿಷ್ಟವೆಂದರೆ ಪೂರ್ಣವಾಗಿ ಛಾವಣಿಯಿಂದ ಆವೃತ್ತವಾಗಿದ್ದು ಇಂಥ ಮಸೀದಿ ಭಾರತದಲ್ಲಿ ಬೇರೊಂದಿಲ, ಈ ನಿಟ್ಟಿನಲ್ಲಿ ಹಿಂದೂರಾಜರುಗಳಂತೆ ಬಹುಮನಿ ಸುಲ್ತಾನರುಗಳು ಕಲೆ ಮತ್ತು ವಾಸ್ತು ಶಿಲ್ಪಕೆ ತಮ್ಮದೇ ಆದ ಸ್ವತಂತ್ರ ಕೊಡುಗೆಯನ್ನುನೀಡಿದ್ದಾರೆ. ಇವರ ರಾಜಧಾನಿಗಳಾಗಿದ್ದ ಗುಲಬರ್ಗಾ ಮತ್ತು ಬೀದರಗಳಲ್ಲಿ ಅನೇಕ ಕೋಟೆಗಳು ಅರಮನೆಗಳು ಮಸೀದಿಗಳು ಸಮಾಧಿಗಳು ಇನ್ನಿತರ ಕಟ್ಟಡಗಳು ಈ ಕಾಲದಲ್ಲಿ ನಿರ್ಮಾಣಗೊಂಡಿವೆ.

ಬಹುಮನಿಯರ ವಾಸ್ತುಶಿಲ್ಪ ಶೈಲಿ:- ಬಹಮನಿಯರ ವಾಸ್ತು ಶೈಲಿಯು ಸ್ಥಳೀಯ ವಾಸ್ತುಶಿಲ್ಪ ಶೈಲಿಗಳಿಂದ ಪ್ರಭಾವತಗೊಂಡಿದೆ. ಇವರ ವಾಸ್ತು ಶಿಲ್ಪದ ಎರಡು ವಿಶೀಷ್ಠ ಶೈಲಿಗಳಿಂದ ಕೊಡಿವೆ 1) ಒಂದು ದೆಹಲಿ ಸುಲ್ತಾನರ ಕಾಲದ ಶೈಲಿ, 2) ಪರ್ಶಿಯನ, ಶೈಲ್ಲಿ ತೂಗಲಕ ಕಾಲದಿಂದ ತನ್ನ ದೆಹಲಿ ಮತ್ತು ದಖನ ಶೈಲಿಗಳು ಕಂಡು ಬಂದರು ನಂತರದ ದಿನಗಳಲ್ಲಿ ಪರ್ಷಿಯನ ಶೈಲಿ ತನತನ್ನವನು ಉಳಿಸಿಕೊಂಡು ಬಂದದ್ದು ಕಂಡುಬರುತ್ತದೆ. ಈ ಕಾರಣದಿಂದ ಈ ಶೈಲಿಯನ್ನು ಸಾರ್ ಸೈನಿಕ ಶೈಲಿ ಎಂದು ಕರೆಯಲಾಗಿದೆ.

ಬಹಮನಿಯರ ಪ್ರಮುಖ ಸ್ಮಾರಕಗಳು:- ಕಲಾ ಅಭಿರುಚಿಹೊಂದಿದ ಬಹುಮನಿ ಸುಲ್ತಾನರು ತಮ್ಮ ರಾಜಧಾನಿಯಾದ ಗುಲಬರ್ಗಾದಲ್ಲಿ 1) ಒಂದು ಕೋಟೆ 3 ಕಿ. ಮಿ. ಸುತ್ತಳತೆ ಇದು. 50 ಅಡಿ ಅಗಲ ದಪದ ಗೋಡೆಹೊಂದದೆ ಅದಕ್ಕೆ 25 ಅಡಿ ಎತ್ತರದ 5 ಕಾವಲು ಗೋಪುರಗಳನ್ನು (ಬುರುಜು) ಕೋಟೆಯ ಸುತ್ತ 30 ಅಡಿ ಆಳದ ಕಂದಕವನ್ನು ಕೋಟೆಯ ಆವರಣದಲ್ಲಿ ಅರಮನೆ, ಆನೆ ಹಾಗೂ ಸೈನಿಕರ ನಿವಾಸ, ಪದ್ಮಾವತಿ ದೇವಸ್ಥಾನ, ದೇವಿ ದೇವಸ್ಥಾನ ಹಾಗೂ ಜಗತ ಪ್ರಸಿದ್ಧ ಜುಮಾಮಸೀದ, ಸುಲ್ತಾನರ ಗೋರಿಗಳು ಗೋರಿಗಳಲ್ಲಿ ಫಿರೋಜನ ಗೋರಿ ವಿಶಿಷ್ಠತೆ ಉಳ್ಳದಾಗಿದೆ. ಇದು ಎರಡು ಅಂತಸ್ತುಗಳು ಹೊಂದಿದೆ. ಪರ್ಸಿಬ್ರೌನ ರವರ ಅಭಿಪ್ರಾಯದಂತೆ ಇದೊಂದು ದೊಡ್ಡ ಮತ್ತು ಮಹತ್ವದ ಸ್ಮಾರಕವಾಗಿದ್ದು ದಖ್ಖನೀನ ಗೋರಿಗಳಲ್ಲಿ ಇದು ಅತ್ಯಂತ ಗಣ್ಯಸ್ಥಾನ ಹೊಂದಿದೆ ಅಲ್ಲದೆ 4 ಮಂದಿ ಸುಲ್ತಾನರ ಹಾಗೂ ಮೂವರು ಸಂತರುಗಳ ಸಮಾಧಿಗಳು ಗುಲಬರ್ಗಾದಲ್ಲಿ ಇವೆ. ಇವುಗಳನ್ನು ಇಂದು ಸಾತ್ ಗುಂಬಜ್ ಎಂದು ಕರೆಯಲಾಗಿದೆ. ಸಂತರ ಸಮಾಧಿಗಳಲ್ಲಿ ಸೂಫಿ ಸಂತ ಖಾಜಾ ಬಂದೇನವಾಜ್‌ರ ದರ್ಗಾ ಅತ್ಯಂತ ಪ್ರಸಿದ್ಧವಾಗಿದೆ.
ಜಾಮೀ ಮಸೀದಿ ಕ್ರಿ.ಶ. 1367:- 1ನೇ ಮಹಮದ್ ಷಾ ಕಾಲದಲ್ಲಿ ಕಟ್ಟಲಾಗಿದೆ ಇದನು ರಫಿ ಎಂಬ ಶಿಲ್ಪಿಯ ನೆರವಿನಿಂದ ನಿರ್ಮಿಸಲಾಗಿದೆ. ಇದು 216 ಅಡಿ ಉದ್ದ 176 ಅಡಿ ಅಗಲವಿದು ಇಡೀ ಭಾರತದಲ್ಲೇ ದೊಡ್ಡ ಮಸೀದಿಯಾಗಿದೆ. ಹಾಗೂ 5000 ಜನರು ಏಕಕಾಲಕೆ ಪ್ರಾರ್ಥನೆ ಸಲ್ಲಿಸುವ ಅವಕಾಶವಿದೆ. ಪ್ರಾರ್ಥನಾ ಭವನದ ಮೇಲ್ಗಡೆ ತಳದಲ್ಲಿ 63 ಅಡಿ ವ್ಯಾಸದ ಒಂದು ದೊಡ್ಡ ಗುಮಟ್ಟವಿದೆ. ಹೊರಭಾಗದಲ್ಲಿ ಕಮಾನುಗಳು ಹಾಗೂ ಎತ್ತರವಾದ ದ್ವಾರ ಬಾಗಿಲು ಕಟ್ಟಡಕ್ಕೆ ಶೋಭೇ ತಂದಿವೆ ಇದರ ಮೇಲೆ 1 ದೊಡ್ಡ ಗುಮ್ಮಟ 4 ಸಣ್ಣ ಗುಮ್ಮಟ ಇದು 62 ಸಣ ಸಣ್ಣ ಗುಮ್ಮಟಗಳು ಇದು. ಇದು ಒಂದು ವಿಶಿಷ್ಟಕಲಾ ಶೈಲಿಯಾಗಿದೆ.

ಫಿರೋಜ್ ಷಾ ಗೋರಿ-1480:-ಗುಲಬರ್ಗಾ ಕೋಟೆಯ ಆವರಣದಲ್ಲಿ ಫಿರೋಜ ಷಾ ತನ್ನ ಗೋರಿಯನ್ನು ತುಘಲಕ ಶೈಲಯಲ್ಲಿ ಕಟ್ಟಿಸಿದಾನೆ. ಇದು 153 ಥ 76 ಅಡಿ ಉದ್ದಗಲವಿದು ಪೂರ್ಣವಾಗಿ ಪರ್ಶಿಯನ ಶೈಲಿ ಯಲ್ಲಿದೆ ಇದರ ಗೋಡೆಗಳಲ್ಲಿ ವರ್ಣಾಲಂಕಾರಕ್ಷರಗಳು ಆಕರ್ಷಣೆಯವಾಗಿವೆ ಅಲ್ಲದೆ ದಕ್ಷಿಣದ ಗೋರಿಗಳಲ್ಲಿಯೇ ಅತ್ಯಂತ ಪ್ರಸಿದ್ಧ ಗೋರಿಯಾಗಿದೆ.
ಬಂದೇ ನವಾಜ್ ದರ್ಗಾ ಕ್ರಿ.ಶ.1422:- ಬಂದಾನವಾಜ ಇವರು ದೆಹಲಿಯ ನಸಿರು ಉದ-ದೀನ ಚೀರಾಗ ಎಂಬ ಸಂತನ ಶಿಷ್ಯರಾಗಿ ಕ್ರಿ.ಶ. 1413 ರಲ್ಲಿ ಗುಲಬರ್ಗಾಕೆ ಬಂದರು ಬಂದೇನವಾಜ್ ಸಂತ ಪರ್ಶಿಯಾದವರಾಗಿದ್ದು ಇಲ್ಲಿ ಬಂದ ನಂತರ ಉರ್ದು ಕಲಿತ್ತು ಹಲವಾರು ಗ್ರಂಥಗಳನ್ನು ರಚಿಸಿದ್ದಾರೆ ಕ್ರಿ.ಶ. 1422 ರಿಂದ 1436ರ ವರೆಗೆ ಆಳಿದ ಅಹ್ಮದ ಶಾಹ ಬಹುಮನಿಯು ನೀಡಿದ ಅಪಾರವಾದ ದತ್ತಿಯಿಂದಾಗಿ ಬಂದಾನವಾಜ ದರ್ಗಾ ನಿರ್ಮಾಣವಾಗಿದೆ ಇದಲ್ಲದೆ ಇತರ ಗುಮ್ಮಟಗಳು ಇದು ಅವು ಮೊಗಲರ ಪರ್ಶಿಯನ ಶೈಲಿಯಲ್ಲಿ ಚಿತ್ರಿಸಲಾಗಿದೆ.

ಇಂದು ಈಸ್ಥಳ ಹಿಂದು ಮುಸ್ಲಿಂರ ಸಾಮರಷದ ಭಕ್ತಿ ಸ್ಥಳವಾಗಿದೆ. ಈ ದರ್ಗಾದ ಸಂಕೀರ್ಣದಲ್ಲಿ ಮದರಸ, ಮಸೀದಿ ಸಂತರ ಸಮಾದಿಗಳು ಖಾನ ಖಾನಾ ಇದು ಅವುಗಳಿಗೆ ಗುಮ್ಮಟಗಳು ಗೋಪುರಗಳು ಇದ್ದು ನೋಡಲು ಬಹಳ ಸುಂದರವಾಗಿವೆ ಇಲ್ಲಿಯ ಕೆಲವು ಪ್ರಮುಖ ಗುಮ್ಮಟಗಳೆಂದರೆ ಷಾ ಕತೊಲ್ ಮುಜಫರ ದರ್ಗಾ ಗೇಸುದರಾಜ, ಸಾತಗುಂಬಜ್ ಗಳು ಈ ಸಾತಗುಂಬಜನಲ್ಲಿ ದ್ವಾರಗಳಲ್ಲಿ ರೇಖಾ ವಿನ್ಯಾಸ, ತಾವರೆಯ ಬಳ್ಳಿಯಾಕಾರದ ರಚನೆಗಳಿಂದ ಕೂಡಿದ ಸುಂದರವಾದ ಚಿತ್ರಕಲೆ ಕಾಣಬಹುದು.

ಈ ರೀತಿಯಾಗಿ ಹಲವಾರು ಕಟ್ಟಡಗಳು ಗುಲಬರ್ಗಾದಲ್ಲಿ ಇನ್ನೂ ಇದು ಅವುಗಳು ಯಾರ ಕಾಲಕೆ ಮತ್ತು ಏಕೆ ಕಟ್ಟಿಸಲಾಯಿತ್ತು ಎಂದು ತಿಳಿದು ಬರುವುದಿಲ್ಲ. ಆದರು ರಚನೆಯಲ್ಲಿ ವಿನ್ಯಾಸದಲ್ಲಿ ತುಂಬಾ ಆಕರ್ಷಣೀಯವಾದ ಕಟ್ಟಡಗಳನ್ನು ಬಹುಮನೀಯರು ನಿರ್ಮಿಸಿದ್ದಾರೆ. ಈ ಕುರಿತು ವಿವರವಾದ ಅಧ್ಯಯನದ ಅವಶಕತೆ ಇದೆ.

### ಆಕರ ಗ್ರಂಥಗಳು:


1) ಭಾರತದ ಇತಿಹಾಸ ಡಾ. ಕೆ. ಸದಾಶಿವಪ್ಪ

2) ಕರ್ನಾಟಕದ ಇತಿಹಾಸ ಮತ್ತು ಸಂಸ್ಕೃತಿಕ ಡಾ. ಬಸವರಾಜ

3) ಬಹಮನಿ ಇತಿಹಾಸ ಡಾ. ಝಾಕೀಯಾ ಅನಸರಿ

4) ಗುಲಬರ್ಗಾ ಗೆಜೇಟೀಯರ

Shodha International Recognition
Multi Disciplinary Research Journal
ISSN 2454-7255
Volume-2 | Issue-2| Nov-2014
Available online at www.godutaidegree.org

# ದಕ್ಷಿಣ ಭಾರತದಲ್ಲಿ ಸಂಗೀತದ ವಿಕಾಸ

**Prof. Revayya Vastrad Math**
Godutai Doddappa Appa Arts & Commerce, Degree College for Women Kalaburagi

ವೈದಿಕ ಯುಗದಿಂದ ಸಂಗೀತದ ವಿಕಾಸ ಕ್ರಮವನ್ನು ನೋಡಿದರೆ, ಪ್ರಾಚೀನ ಕರ್ನಾಟಕದಲ್ಲಿ ವೈದಿಕ ಕಾಲದಲ್ಲಿ ಯಾವ ರೀತಿಯ ಸಂಗೀತವಿತ್ತೋ ಅದೇ ರೀತಿಯ ಸಂಗೀತ ಪ್ರಚಾರದಲ್ಲಿತ್ತೆಂದು ತಿಳಿದು ಬರುತ್ತದೆ. ದಕ್ಷಿಣ ಭಾರತದ ಪ್ರಾಚೀನ ದೇವಾಲಯಗಳು ರಾಜರ ಅರಮನೆಗಳಂತೆ ಕಲಾಪೂರ್ಣವಾಗಿದ್ದವು. ಜನರು ದೇವಸ್ಥಾನಕ್ಕಾಗಿ ಅಂಗ ಭೋಗಕ್ಕೆ ಹಾಗು ರಂಗಬೋಗಕ್ಕೆ ದತ್ತಿ (ದಾನ) ಗಳನ್ನು ಕೊಡುತ್ತಿದ್ದರು. ಅಂಗಭೋಗಗಳೆಂದರೆ, ದೇವರ ಶರೀರಕ್ಕೆ ಸಲ್ಲುವ ಧೂಪ, ದೀಪ, ನೈವೇದ್ಯ, ಗಂಧ ಇತ್ಯಾದಿ, ರಂಗಭೋಗವೆಂದರೆ, ದೇವರೆದುರಿಗೆ ನಡೆಯುವ ನರ್ತನ, ಗಾಯನ ಹಾಗೂ ವಾದನ ಮುಂತಾದವುಗಳು. ಸಾಮಾನ್ಯವಾಗಿ ಅನೇಕ ದೇವಸ್ಥಾನಗಳಲ್ಲಿ ವೀಣಾ ವಾದಕರು, ಆಶ್ರಯ ಪಡೆದಿದ್ದರು. ಅವರು ನೃತ್ಯಗಾಯನ ಹಾಗೂ ವಾದನಗಳಲ್ಲಿ ನಿಷ್ಣಾತರಾಗಿದ್ದರು. ತಮ್ಮ ಕಲೆಯಿಂದ ದೇವರ ಸೇವೆ ಮಾಡುತ್ತಿದ್ದರು. ಪ್ರಸಿದ್ಧ ಸಂಗೀತಜ್ಞನಾದ ಮತಂಗ ಮುನಿಯು ದಕ್ಷಿಣ ಭಾರತದ ವಿದ್ವಾಂಸನಾಗಿದ್ದನು. ಇವ್ನು ಸಂಗೀತಶಾಸ್ತ್ರ ಹಾಗೂ ಗೀತಗಳ ತತ್ವದ ವಿವೇಚನೆಯನ್ನು ತನ್ನ ಗ್ರಂಥದಲ್ಲಿ ಉಲ್ಲೇಖ ಮಾಡಿದ್ದಾನೆ. ಕರ್ನಾಟಕದಲ್ಲಿ ಜನಿಸಿದ ಇವನು, ಒಟ್ಟಿಗೆ 50 ಪ್ರಬಂಧಗಳ ಉಲ್ಲೇಖವನ್ನು ಮತಂಗನು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ.

ಕ್ರಿ.ಶ.900 ರಲ್ಲಿ ಮತಂಗ ಮುನಿಯಿಂದ ರಚಿತವಾದ ಬೃಹದ್ದೇಶಿ ಎಂಬ ಗ್ರಂಥದಲ್ಲಿ ಪ್ರಥಮವಾಗಿ ಕರ್ನಾಟಕ ಎಂಬ ದೇಶೀ ರಾಗದ ಉಲ್ಲೇಖ ದೊರಕುವುದು. ಇದರ ಹೊರತಾಗಿ ಕನ್ನಡ ಭಾಷೆಯಲ್ಲಿ ರಚಿಸಿದ ಕಂದ, ಏಲಾ, ವರ್ಣ, ಶುಕಸಾರಿಕ ಮುಂತಾದ ಪ್ರಬಂಧಗಳ ಉಲ್ಲೇಖವೂ ಕೂಡಾ ಮಾಡಲ್ಪಟ್ಟಿದೆ.

ಜನರಲ್ಲಿ ಸಾಹಿತ್ಯದ ಪ್ರಾಚೀನ ಮಹಾಕಾವ್ಯಗಳಲ್ಲಿ ಆ ಕಾಲದ ಸಮಾಜದ ಪರಿಚಯ ನಮಗೆ ತಿಳಿಯುತ್ತದೆ. ಜನರಲ್ಲಿ ಸಂಗೀತದ ಭಾವನೆ ಹಾಗೂ ಅಭಿರುಚಿ ಯಾವ ರೀತಿಯಾಗಿತ್ತು ಎಂಬುದರ ಮಾಹಿತಿ ದೊರಕುತ್ತದೆ. 10ನೇ ಶತಮಾನದಿಂದ 12ನೇ ಶತನಮಾನದ ವರೆಗಿನ ಕಾಲದಲ್ಲಿ ರಚಿಸಲ್ಪಟ್ಟ ಕನ್ನಡ, ತಮಿಳು, ತೆಲುಗು, ಮಹಾ ಕಾವ್ಯಗಳಲ್ಲಿ ಆ ಕಾಲದ ಸಮಾಜದಲ್ಲಿ ಪುರುಷ ಹಾಗೂ ಸ್ತ್ರೀಯರು ಸಂಗೀತ ಕಲೆಗಳಲ್ಲಿ ವಿಶೇಷ ಆಸಕ್ತಿ ಹೊಂದಿದವರಾಗಿದ್ದರು ಎಂದು ತಿಳಿದು ಬರುತ್ತದೆ. ಆಗಿನ ರಾಜ ದರ್ಬಾರಿನಲ್ಲಿ ಯುವರಾಜ, ಯುಜರಾಜ್ಞಿಯವರಿಗೆ ಸಂಗೀತದ ಶಿಕ್ಷಣ ನೀಡಲಾಗುತ್ತಿತ್ತು. ನಗರ ಪ್ರದೇಶದಲ್ಲಿ ಸಭಾಗೃಹಗಳು ಇದ್ದವು.

ಇವುಗಳ ಮುಖೇನ ಸಂಗೀತ, ನೃತ್ಯ ಹಾಗೂನಾಟಕಗಳ ಪ್ರದರ್ಶನ ನಡೆಯುತ್ತಿದ್ದವು. ಆ ಕಾಲದಲ್ಲಿ ದಕ್ಷಿಣ ಭಾರತದಲ್ಲಿ ಗಾಯನವು ಅನ್ಯ ವಾದ್ಯ ವಾದನಗಳೊಂದಿಗೆ ಜರುಗುತ್ತಿದ್ದವು. ಗಾಯಕರಿಗೆ ಮುಖಾರಿ ಎಂಬ ಸಂಜ್ಞೆಯಿತ್ತು. ಅನೇಕ ಗಾಯನ ಪ್ರಕಾರಗಳು ಅಂದರೆ, ಚಟ್ಟಣ, ಪಾಡುಗಬ್ಬ, ಭಜನೆಗಬ್ಬಾ, ಸುಪ್ಪಿ, ಪಾಡು, ಚೌಪತಿ, ಮುಂತಾದ ಹೆಸರುಗಳು ಉಲ್ಲೇಖವಾಗಿದೆ.

ಕನ್ನಡದಲ್ಲಿ ಒನಕೆ ಹಾಡು, ಮಂಗಲಾ ಚಾರ, ಓಪಿ, ಧವಲಾ ಮುಂತಾದ ರಚನೆಗಳ ಉಲ್ಲೇಖ ಸಿಗುತ್ತದೆ. ಹಾಗೂ ವೇದಕಾಲದ ವಾದ್ಯಗಳಾದ ಪಟಹ, ವಲ್ಲರಿ, ಭೇರಿ, ವಿಪಂಚಿ, ಕಿನ್ನರಿ ಮೊದಲಾದ ವಾದ್ಯಗಳು ಪ್ರಚಾರದಲ್ಲಿದ್ದವು ಎಂದು ತಿಳಿದು ಬರುತ್ತದೆ.

ಆಗಿನ ಪ್ರಸಿದ್ದ ವಿದ್ವಾಂಸನಾದ ಸೋಮನಾಥನು 32 ಪ್ರಕಾರದ ವೀಣೆ, 18 ಪ್ರಕಾರದ ಕೊಳಲಿನ ವರ್ಣನೆಯನ್ನು ತನ್ನ ಗ್ರಂಥದಲ್ಲಿ ಉಲ್ಲೇಖಿಸಿದ್ದಾನೆ.

ಚಾಲುಕ್ಯ ವಂಶದ ಮೂರನೇ ಸೋಮೇಶ್ವರನು (ಕ್ರಿ.ಶ. 1127-11-36) ಶ್ರೇಷ್ಠ ರಾಜನಾಗಿದ್ದನಲ್ಲದೇ ಶ್ರೇಷ್ಠ ಸಂಗೀತಗಾರನೂ ಆಗಿದ್ದನು. ಕ್ರಿ.ಶ. 1131ರ ಸುಮಾರಿಗೆ ಸಂಸ್ಕೃತ ಭಾಷೆಯಲ್ಲಿ ರಚಿತವಾದ ಅಭಿಲಾಷಿತಾರ್ಥ ಅಥವಾ ಮಾನಸೋಲ್ಲಾಸ ಎಂಬ ಗ್ರಂಥ ರಚಿಸಿ, ಅದರಲ್ಲಿ ನ್ಯಾಯ, ನೀತಿ, ರಾಜ್ಯಭಾರ, ಔಷಧ, ಆಯುಧ, ಭವಿಷ್ಯಶಾಸ್ತ್ರ, ಗೀತ, ವಾದ್ಯ ಹಾಗೂ ನರ್ತನಗಳ ಬಗ್ಗೆ 3 ಅದ್ಯಾಯಗಳಲ್ಲಿ ಬರೆದಿದ್ದಾನೆ. ಇಮ್ಮಡಿ ಜಗದೇಕ ಮಲ್ಲನು (1136 ರಿಂದ 1150) ರ ಅವಧಿಯಲ್ಲಿ ಸಂಗೀತ ಚೂಡಾಮಣಿ ಎಂಬ ಗ್ರಂಥ ರಚಿಸಿದ್ದಾನೆ. ಇದರಲ್ಲಿ ರಾಗಗಳ, ತಾಲಗಳ ವಿಸ್ತೃತ ವರ್ಣನೆ ಕಂಡು ಬರುತ್ತದೆ.

ಕ್ರಿ.ಶ.1180 ರಲ್ಲಿ ಚಾಲುಕ್ಯಾಧಿಪತಿ ಅಜಯಪಾಲನ ಆಶ್ರಯದಲ್ಲಿದ್ದ ಸೋಮಭೂಪಾಲ ಎಂಬ ಸಂಗೀತ ವಿದ್ವಾಂಸನು ಸಂಗೀತ ರತ್ನಾವಲಿ ಎಂಬ ಗ್ರಂಥ ರಚಿಸಿರುವನು. ಇದರಲ್ಲಿ 2ನೇ ಅಧ್ಯಾಯದಲ್ಲಿ ಸ್ವರ ಮತ್ತು ಗ್ರಾಮಗಳನ್ನು, 3ನೇ ಅಧ್ಯಾಯದಲ್ಲಿ

ಪ್ರಬಂಧ, 4ನೇದರಲ್ಲಿ 42 ರಾಗಗಳ ವರ್ಣನೆ, 6ನೇ ಅಧ್ಯಾಯದಲ್ಲಿ ತಾಲಗಳ, 7ನೇ ಅಧ್ಯಾಯದಲ್ಲಿ ದೇಶೀ ರಾಗಗಳು, 8ರಲ್ಲಿ ಹಾಗೂ 9ರಲ್ಲಿ ವಿವಿಧ ವಾದ್ಯಗಳ ವರ್ಣಗಳಿವೆ.

12ನೇ ಶತಮಾನದಲ್ಲಿ ಕನ್ನಡದಲ್ಲಿ ರಚಿಸಿದ ಚಾರುಮತಿ ಎಂಬ ಜೈನಕಾವ್ಯದ ಉಲ್ಲೇಖದಲ್ಲಿ ವಿವಿಧ ಶಾಸ್ತ್ರಗಳು, ಸಂಗೀತ ಮತ್ತು ಅರ್ಥಶಾಸ್ತ್ರಗಳ ಹೊಸ ವ್ಯಾಖ್ಯೆ ದೊರಕುತ್ತದೆ.

12ನೇ ಶತಮಾನದ ಮಧ್ಯದಲ್ಲಿ ಬಸವ, ಅಲ್ಲಮ, ಅಕ್ಕ ಮಹಾದೇವಿ, ಮುಂತಾದ ಶಿವಶರಣರು ವಚನ ಕೃತಿಗಳನ್ನು ರಚಿಸಿ ಸಂಗೀತಕ್ಕೆ ಅಮೋಘ ಕಾಣಿಕೆ ನೀಡಿದ್ದಾರೆ.

13ನೇ ಶತಮಾನದ ಮಧ್ಯ ಪ್ರಾಚೀನ ಕರ್ನಾಟಕ ರಾಜಧಾನಿ ದೇವಗಿರಿಯಲ್ಲಿ ಶಾರ್ಙ್ಗದೇವ, (ಸಾರಂಗದೇವ), ಪ್ರಸಿದ್ಧ ವಿದ್ವಾಂಸರು ಸಂಗೀತ ರತ್ನಾಕರ ಎಂಬ ಗ್ರಂಥದಲ್ಲಿ ಕರ್ನಾಟಕ, ಕರ್ನಾಟಕ ಗೌಡ, ಕರ್ನಾಟಿ, ಮುಂತಾದ ರಾಗಗಳ ಉಲ್ಲೇಖ ಮಾಡಿದ್ದಾನೆ.

14ನೇ ಶತಮಾನ ವಿಜಯನಗರ ಸಾಮ್ರಾಜ್ಯದ ವಿದ್ಯಾರಣ್ಯರು (ಮಾಧವಾಚಾರ್ಯರು) ಇವರ ಮಾರ್ಗದರ್ಶನದಲ್ಲಿ ಕರ್ನಾಟಕ ಸಂಗೀತ ಅಭಿವೃದ್ಧಿಯಾಯಿತು. ಅವರು ರಚಿಸಿದ ಸಂಗೀತ ಸಾರ ಇದರಲ್ಲಿ ರಾಗ ವರ್ಗೀಕರಣ ಪದ್ಧತಿಯನ್ನು ವಿವರಿಸಲಾಗಿದೆ. ಇವರ ಕಾಲದಲ್ಲಿ ಪ್ರಚಾರದಲ್ಲಿದ್ದ 50 ರಾಗಗಳನ್ನು 15 ಮೇಲಗಳನ್ನು (ಥಾಟ) ಇದಕ್ಕೂ ಮೊದಲು ಯವನ ಪದ್ಧತಿಯಲ್ಲಿದ್ದ ಮುಖಾಂ ಎಂಬುದರ ಆಧಾರದ ಮೇಲೆ ವರ್ಗೀಕರಿಸಿದೆ. ಈ ಕಾಲದಲ್ಲಿ ಸಾಹಿತ್ಯ ಸಂಗೀತ ಕಲೆಗೆ ಬಹಳ ಪ್ರೋತ್ಸಾಹ ದೊರಕಿತ್ತು.

15ನೇ ಶತಮಾನದಲ್ಲಿ ನಿಜಗುಣ ಶಿವಯೋಗಿಗಳು ಸಂಗೀತದ ಮಹಾವಿದ್ವಾಂಸರಾಗಿದ್ದು, ಇವರ ವಿವೇಕ ಚಿಂತಾಮಣಿ ಗ್ರಂಥ ಇದರಲ್ಲಿ ಸಂಗೀತ ಶಾಸ್ತ್ರದ ಅನೇಕ ವಿಷಯ, ಶೃತಿ ಅಲಂಕಾರ, ಜಾತಿ, ಗ್ರಾಮ, ರಾಗ, ವಾದ್ಯ ಮುಂತಾದವುಗಳನ್ನು ಚರ್ಚಿಸಲಾಗಿದೆ. ಕನ್ನಡ ಭಾಷೆಯಲ್ಲಿ ಮೊದಲ ಬಾರಿಗೆ ಸಂಗೀತದ ವಿಷಯವನ್ನು ಪ್ರಸ್ತಾಪಿಸಿದ ಮೊದಲ ಗ್ರಂಥ ಇದಾಗಿದೆ.

ವಿಜಯನಗರದ ವ್ಯಾಸರಾಯರು ಸಂಸ್ಕೃತ ಹಾಗು ಸಂಗೀತ ವಿದ್ವಾಂಸರಾಗಿದ್ದು, ಅನೇಕ ಕೀರ್ತನೆ, ಸುಳಾದಿಗಳನ್ನು ರಚಿಸಿದ್ದಾರೆ. ಕರ್ನಾಟಕ ಸಂಗೀತದ ಆಚಾರ್ಯ ಪುರುಷರಾದ ಪುರಂದರ ದಾಸರು, ಕನಕದಾಸರು, ಇವರ ಶಿಷ್ಯಂದಿರಾಗಿದ್ದಾರೆ.

ಕೃಷ್ಣದೇವರಾಯನ ಅರಮನೆಯಲ್ಲಿ ಬಂಥಂ ಲಕ್ಷ್ಮೀನಾರಾಯಣ ಎಂಬ ನೃತ್ಯ ಶಿಕ್ಷಕನಿದ್ದನು. ಇವನು ಸಂಗೀತ ಮತ್ತು ನೃತ್ಯದಲ್ಲಿ ಪಂಡಿತನಿದ್ದು, ಸಂಗೀತ ಸೂರ್ಯೋದಯ ಎಂಬ ಗ್ರಂಥ ರಚಿಸಿದ್ದಾನೆ.

18ನೇ ಶತಮಾನದಲ್ಲಿ ದಕ್ಷಿಣ ಭಾರತವು ವಿವಿಧ ಕಲೆಗಳ ಸುವರ್ಣ ಕಾಲವಾಗಿತ್ತು. ಈ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು, ತಮಿಳು, ಭಾಷೆಗಳಲ್ಲಿ ಅನೇಕ ಸಂಗೀತಕ್ಕೆ ಸಂಬಂಧಿಸಿದ ಗ್ರಂಥಗಳ ರಚನೆಗಳಾದವು. ಸಂಗೀತ ಗಂಗಾಧರ ಎಂಬ ಗ್ರಂಥವನ್ನು ನಂಜರಾಜ ಎಂಬುವರಿಂದ ರಚನೆಯಾಯಿತು. ಜಯದೇವನ ಗೀತ ಗೋವಿಂದವೂ ಇದೇ ಕಾಲದಲ್ಲಿ ರಚನೆಯಾಯಿತು.

18ನೇ ಹಾಗೂ 19ನೇ ಶತಮಾನದಲ್ಲಿ ಹರಿದಾಸರಾದ ಗೋಪಾಲದಾಸ, ಜಗನ್ನಾಥದಾಸ, ವಿಜಯದಾಸ, ಪ್ರಸನ್ನ ವೆಂಕಟದಾಸ, ಕನ್ನಡದಲ್ಲೇ ಕಾವ್ಯ ರಚನೆ ಮಾಡಿದ್ದಾರೆ.

ಸಂಗೀತ ವಿಕಾಸದ ಸಲುವಾಗಿ ಮೈಸೂರು ಮಹಾರಾಜರು ಸಲ್ಲಿಸಿದ ಸೇವೆ ಅಪಾರ. ಮುಮ್ಮಡಿ ಕೃಷ್ಣರಾಜ ಒಡೆಯರರು ಹಿಂದೂಸ್ಥಾನಿ, ಕರ್ನಾಟಕಿ, ಕಲಾವಿದರಿಗೆ ಆಶ್ರಯವಾಗಿದ್ದರು. ಮೈಸೂರು ಅರಮನೆಯಲ್ಲಿ ಸತತವಾಗಿ ಸಂಗೀತ ಕಾರ್ಯಕ್ರಮ ಜರುಗುತ್ತಿದ್ದವು.

ಮಂಗಳೂರಿನ ತುಪಾಕಿ ವಂಶಜರು ಸಂಗೀತ ವಿಕಾಸಕ್ಕಾಗಿ ಅಪೂರ್ವ ಕಾಣಿಕೆ ಇತ್ತಿದ್ದಾರೆ. ಇವರಲ್ಲಿ ವೆಂಕಟ ರಮಣಾಚಾರ್ಯ, ರಾಮಾಚಾರ್ಯ ಮುಂತಾದವರು ಸಂಗೀತಕ್ಕೆ ಸಂಬಂಧಿಸಿದ ಗ್ರಂಥಗಳನ್ನು ರಚಿಸಿದ್ದಾರೆ.

20ನೇ ಶತಮಾನದಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ ಶಾಸನ ಕಾಲವು ಸಂಗೀತಕ್ಕೆ ಹೆಸರು ವಾಸಿಯಾಗಿತ್ತು. ವೀಣೆ ಶೇಷಣ್ಣ, ವಾಸುದೇವಾಚಾರ್ಯ, ಟೈಗರ ವರದಾಚಾರ್ಯ, ರಾಮಾನುಜ ಅಯ್ಯಂಗಾರ, ಬಿಡಾರಂ ಕೃಷ್ಣಪ್ಪಾ, ಮುತ್ತಯ್ಯ ಭಾಗವತ, ಫೈಯಾಜ ಖಾನರು, ವಿಲಾಯತ ಹುಸೇನ ಖಾನರು, ಇನಾಯತ ಖಾನರು ಇದ್ದರು. ಇದೇ ಕಾಲದಲ್ಲಿ ಹಿಂದೂಸ್ಥಾನಿ ಸಂಗೀತದ ಪ್ರಚಾರವೂ ಪ್ರಾರಂಭವಾಯಿತು.

ಕೇವಲ ರಾಜಾಶ್ರಯವಷ್ಟೇ ಅಲ್ಲದೇ ಅನೇಕ ಜಮೀನ್ದಾರರಿಂದಲೂ ಸಂಗೀತಕ್ಕೆ ಆಶ್ರಯ ದೊರಕಿತು. ಜಯ ಚಾಮರಾಜ ಒಡೆಯರ್ ಅವರು ಭಾರತೀಯ ಸಂಗೀತವಲ್ಲದೇ ಪಾಶ್ಚಾತ್ಯ ಸಂಗೀತದಲ್ಲಿಯೂ ಅಭಿರುಚಿ ಹೊಂದಿದ್ದರು. ಒಟ್ಟಿನಲ್ಲಿ ಸಂಗೀತ ಹಾಗು ನೃತ್ಯದ ಉಜ್ವಲ ಪರಂಪರೆಯನ್ನು ನಮ್ಮ ದಕ್ಷಿಣ ಭಾರತವು ಹೊಂದಿದೆ.